**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಪ್ರಾಸ – 7

**CC No**: 41/2020 ಚಾಸ– 8

| | |
|---|---|
| ಹೆಸರು | ಟಿ ವಿ ಸುಬ್ರಹ್ಮಣ್ಯ |
| ತಂದೆಯ ಹೆಸರು | **ವೀರಭದ್ರಯ್ಯ** |
| ವಯಸ್ಸು | **49 ವರ್ಷ** |
| ಉದ್ಯೋಗ | ರಾಜ್ಯಗುಪ್ತ ವಾರ್ತೆ ಘಟಕ, ಹಾಸನ |
| ವಾಸಸ್ಥಳ | ಹಾಸನ |

ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನಾನು 2018 ರಿಂದ ಫೆಬ್ರವರಿ 2025 ರವರೆಗೆ ನಾನು ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 03.01.2020 ರಂದು ಚಾಸಾ 13 ರವರು ನನ್ನನ್ನು ಹಾಗೂ ಚಾಸಾ 9 ರಿಂದ 12 ರವರನ್ನು ಶಾಂತಿಗ್ರಾಮ ಪೊಲೀಸ್ ಠಾಣೆ ಮೊಕ್ಕದ್ದಮೆ ನಂ 142/2019 ಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಮಾಲು ಪತ್ತೆಗಾಗಿ ಆ ಪ್ರಕಾರ ನಾನು ಇಲಾಖಾ ಜೀಪಿನಲ್ಲಿ ಹಲಸನ ಹಳ್ಳಿ , ಮಳ್ಳಿ ಕ್ರಾಸ್ ಹತ್ತಿರ ಗಸ್ತು ಮಾಡುತ್ತಿದ್ದಾಗಾ ಸಂಜೆ 6–30 ಗಂಟೆಗೆ ಮೊಸಳೆಹೊಸಹಳ್ಳಿ ಕಡೆಯಿಂದ ಕೆ ಎ 09 ಎನ್ 1703 ನಂಬರಿನ ಕಾರು ಬಂದಿದ್ದು ನಾವು ಅದನ್ನು ತಡೆದು ನಿಲ್ಲಿಸಿ ಚಾಲನಕನ ಹೆಸರು ವಿಳಾಸ ವಿಚಾರಿಸಿದಾಗ

ತನ್ನ ಹೆಸರನ್ನು ಶಕೀರ್, ವಾಸ ಹಳೇತಾಲ್ಲೂಕು ಗ್ರಾಮ ಮಡಿಕೇರಿ ಜಿಲ್ಲೆ ಎಂದು ಹೇಳಿದ ಆತನ ಜೊತೆಗೆ ಕಾರಿನಲ್ಲಿ ಇದ್ದ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ರಿಯಾಸ್ ಪಾಶಾ ಅಲಿಯಾಸ್ ಇಲಿಯಾಸ್ ಬಿನ್ ಸಿರಾಜ್ ಪಾಶಾ ವಾಸ ಹಲಗನ ಹಳ್ಳಿ ಗ್ರಾಮ ಹಾಗೂ ಅರುಣ್ ಬಿನ್ ಜಯ ವಾಸ ಹಳೇ ತಾಲ್ಲೂಕು ಗ್ರಾಮ ಎಂದು ಹೇಳಿದರು. ಅಷ್ಟರಲ್ಲಿ ಮೊಸಳೆಹೊಸಹಳ್ಳಿ ಕಡೆಯಿಂದ ಇನ್ನೊಂದು ಕೆ ಎ 04 ಎಂ ಸಿ 0800 ನಂಬರಿನ ಕಾರು ಬಂದಿದ್ದು, ಆಗ ನಾವು ಅದನ್ನು ತಡೆದಾಗ ಚಾಲಕನು ಕಾರನ್ನು ನಿಲ್ಲಿಸಿ ಓಡಿ ಹೋಗಿರುತ್ತಾನೆ. ಕಾರಿನಲ್ಲಿದ್ದ ವ್ಯಕ್ತಿಯ ಹೆಸರು ವಿಳಾಸನಮ್ನು ವಿಚಾರಿಸಿದಾಗ ತನ್ನ ಹೆಸರನ್ನು ಇಬ್ರಾಹಿಂ ಬಿನ್ ಖಾದರ್ ವಾಸ ಹಳೇ ತಾಲ್ಲೂಕು ಎಂದು ತಿಳಿಸಿದ್ದು ಓಡಿ ಹೋದ ಚಾಲಕನ ಹೆಸರು ವಿಚಾರಿಸಿದಾಗ ಸುಮೀರ್ ಅಹಮದ್ ವಾಸ ಹಲಗನ ಹಳ್ಳಿ ಎಂದು ಹೇಳಿದ. ಸದರಿ ಅವರೆಲ್ಲರೂ ನಾವು ಕೇಳಿದಂತಹ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡದೇ ಇದ್ದುದ್ದರಿಂದ ಅವರುಗಳನ್ನು ವಶಕ್ಕೆ ಪಡೆದು ಚಾಸಾ 13 ರವರೊಂದಿಗೆ ಹಾಜರು ಪಡಿಸಿ ವರದಿ ಮಾಡಿಕೊಂಡೆವು.

ನಂತರ ದಿಃ 07.01.2020 ರಂದು ಚಾಸಾ 12 ರವರೊಂದಿಗೆ ಕೃತ್ಯ ನಡೆದ ಸ್ಥಳದ ಮಹಜರ್ ಸಲುವಾಗಿ 3 ಸ್ಥಳಗಳಿಗೆ ಭೇಟಿ ನೀಡಿದ್ದು ಮೊದಲು ಕಡವಿನ ಬಾಚನಹಳ್ಳಿ ಗ್ರಾಮಕ್ಕೆ ಹೋಗಿ 2 ನೇ ಆರೋಪಿ ತೋರಿಸಿದ ಜಾಗದಲ್ಲಿ ಚಾಸಾ 6 ಮತ್ತು 7 ರವರ ಸಮಕ್ಷಮ ಬೆಳ್ಳಗೆ 7-00 ಯಿಂದ 7-15 ರ ವರೆಗೆ ಸ್ಥಳ ಮಹಜರ್ ಮಾಡಿರುತ್ತೇವೆ. ಸದರಿ ಸ್ಥಳವು ರಾಜಯ್ಯ ಅವರ ಮನೆಯ ಕುರಿ ಕೂಡುಹಾಕುವ ಕೊಟ್ಟಿಗೆ ಆಗಿರುತ್ತದೆ. ಸದರಿ ರಾಜಯ್ಯ ಅವರ ಕೊಟ್ಟಿಗೆಯಿಂದ 22 ಕುರಿಗಳನ್ನು ತಾನು ಮತ್ತು ಉಳಿದ ಆರೋಪಿತರು ಸೇರಿ ಕಳವು ಮಾಡಿಕೊಂಡು ಮೇಲೆ ಹೇಳಿದ 2 ಕಾರುಗಳಲ್ಲಿ ತುಂಬಿ ಕೊಂಡು ಹೋಗಿ ಮೈಸೂರಿನ ಮಟನ್ ಸ್ಟಾಲಿಗೆ ಮಾರಾಟ ಮಾಡಿ ಮುಂಗಡ ಹಣ ಪಡೆದುಕೊಂಡು 35 ಸಾವಿರ ರೂ ಬಾಕಿ ಉಳಿಸಿಕೊಂಡಿರುವುದಾಗಿ 2 ನೇ ಆರೋಪಿ ಹೇಳಿದ.

ನಂತರ ದೇವರ ಮುದ್ದನಹಳ್ಳಿಗೆ ಭೇಟಿ ನೀಡಿ ಚಾಸಾ 6 ಮತ್ತು 7 ರವರ ಸಮಕ್ಷಮ 2 ನೇ ಆರೋಪಿ ತೋರಿಸಿದ ಜಾಗದಲ್ಲಿ ಬೆಳಗ್ಗೆ 7-30 ಯಿಂದ 7-45 ರ ವರೆಗೆ ಸ್ಥಳ ಮಹಜರ್ ಮಾಡಿರುತ್ತೇವೆ. ಸದರಿ ಸ್ಥಳವು ದೇವರ ಮುದ್ದನಹಳ್ಳಿ ಗ್ರಾಮದ ಚಿಕ್ಕಯ್ಯ ಅವರಿಗೆ ಸೇರಿದ ಕೊಟ್ಟಿಗೆ ಆಗಿದ್ದು ಅಲ್ಲಿಂದ ಆರೋಪಿತರು 5 ಕುರಿ ಹಾಗೂ 5 ಕುರಿ ಮರಿಗಳನ್ನು ಕದ್ದುಕೊಂಡು ಹೋಗಿ ಎತ್ತುಗೋಡನ ಹಳ್ಳಿ ಸಂತೆಯಲ್ಲಿ 25 ಸಾವಿರ ರೂ ಗೆ ಮಾರಾಟ ಮಾಡಿ ಹಂಚಿಕೊಂಡಿರುತ್ತೇವೆ ಎಂದು 2 ನೇ ಆರೋಪಿ ತಿಳಿಸಿದರು. ನಂತರ ಎಡೇಗೌಡನ ಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಚಾಸಾ 6 ಮತ್ತು 7 ರವರ ಸಮಕ್ಷಮ 2 ನೇ ಆರೋಪಿ ತೋರಿಸಿದ ಜಾಗದಲ್ಲಿ 8-15 ರಿಂದ 8-30 ಗಂಟೆಯ ವರೆಗೆ ಚಾಸಾ 1 ರವರ ಕೊಟ್ಟಿಗೆಯ ಮಹಜರ್ ಮಾಡಿರುತ್ತೇವೆ. ಸದರಿ ಸ್ಥಳ ಕೊಟ್ಟಿಗೆಯಿಂದ ಆರೋಪಿತರು 16 ಕುರಿಗಳನ್ನು ಕಳ್ಳತನ ಮಾಡಿ ಮೈಸೂರಿನ ಮಟನ್ ಸ್ಟಾಲಿಗೆ ಮಾರಾಟ ಮಾಡಿ ಮುಂಗಡ ಹಣ ಪಡೆದಿರುತ್ತೇವೆ ಎಂದು 2 ನೇ ಆರೋಪಿ ತಿಳಿಸಿದ.

ನಂತರ ಅರಕಲಗೂಡಿಗೆ ಭೇಟಿ ನೀಡಿ 2 ನೇ ಆರೋಪಿ ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ಪಂಚುನಾಮೆ ಮಾಡಿರುತ್ತೇವೆ. ನಂತರ ಮಧ್ಯಾಹ್ನ 12-00 ಗಂಟೆಗೆ 2 ನೇ ಆರೋಪಿ ನಮ್ಮನ್ನು ಮೈಸೂರಿನ ಮಟನ್ ಸ್ಟಾಲಿಗೆ ಕರೆದುಕೊಂಡು ಹೋಗಿ ಇದೇ ಅಂಗಡಿಗೆ ತಾವು ಕದ್ದಿರುವ ಕುರಿಗಳನ್ನು ಮಾರಾಟ ಮಾಡಿ ಮುಂಗಡ ಹಣ ಪಡೆದು 35 ಸಾವಿರ ರೂ ಬಾಕಿ ಉಳಿಸಿಕೊಂಡಿದ್ದೇವೆ ಎಂದು ಹೇಳಿದರು. ಆಗ ಮಟನ್ ಸ್ಟಾಲ್ ಮಾಲೀಕರು 2 ನೇ ಆರೋಪಿಯನ್ನು ನೋಡಿ ಗುರುತಿಸಿದರು. ಅಲ್ಲದೆ ಸಂತೆಯಿಂದ ಕುರಿಗಳನ್ನು ತಂದು ನಿಮಗೆ ಕೊಟ್ಟಿದ್ದೇವೆ ಎಂದು ಹೇಳಿದ್ದರಿಂದ ನಾನು ಆರೋಪಿತರಿಂದ ಸದರಿ ಕುರಿಗಳನ್ನು ಖರೀದಿಸಿ ಅವುಗಳ ಮಾಂಸವನ್ನು ಮಾರಾಟ ಮಾಡಿದ್ದೇನೆ ಈ ದಿನವೇ ತನಗೆ ಆರೋಪಿತರು ಕದ್ದಿರುವ ಮಾಲನ್ನು ನನಗೆ ತಂದು ಕೊಟ್ಟಿರುತ್ತಾರೆ ಎಂದು ಗೊತ್ತಾಯಿತು ಹೀಗಾಗಿ ಬಾಕಿ ಇರುವ 35 ಸಾವಿರು ರೂಗಳನ್ನು ಈ ದಿನವೇ ಹಾಸನದ

ಗ್ರಾಮಾಂತರ ವೃತ್ತ ನಿರೀಕ್ಷಕರ ಕಛೇರಿಗೆ ತಂದು ಕೊಡುತ್ತೇನೆ ಎಂದು ಅವರು ಹೇಳಿದರು.

ನಂತರ ಚನ್ನರಾಯಪಟ್ಟಣ ಹಾಗೂ ಶ್ರವಣಬೆಳಗೊಳದಲ್ಲಿ ಪಂಚರು ಸಮಕ್ಷಮ ಪಂಚುನಾಮೆಗಳನ್ನು ಮಾಡಿ, ನಂತರ ಸಂಜೆ ಚಾಸಾ 16 ರವರ ಕಛೇರಿಗೆ ಹೋಗಿ ಮರುದಿನ ಮತ್ತೆ 2 ನೇ ಆರೋಪಿಯನ್ನು ತನಿಖಾಧಿಕಾರಿ ಪೊಲೀಸ್ ವಶಕ್ಕೆ ಪಡೆದು ಗಂಡಸಿ, ನುಗ್ಗೇಹಳ್ಳಿ ಮತ್ತು ಬಾಣಾವಾರದಲ್ಲಿ ಪಂಚರು ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತೇವೆ. ನಂತರ ಮಧ್ಯಾಹ್ನ 2-00 ಗಂಟೆಗೆ ಚಾಸಾ 13 ರವನ್ನು ಹಾಜರುಪಡಿಸಿರುತ್ತೇವೆ. ಈ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿ ವಿ ಸಿ ಅಲ್ಲಿ ಕಾಣುತ್ತಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ 5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 5(ಸಿ) ಎಂದು ಗುರುತಿಸಲಾಯಿತು. ಆ ದಿನ ವಶಕ್ಕೆ ಪಡೆದ ಎಲ್ಲಾ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ದಿಃ 03.01.2020 ರಂದು ಚಾಸಾ 13 ರವರು ನನ್ನನ್ನು ಹಾಗೂ ಚಾಸಾ 9 ರಿಂದ 12 ರವರನ್ನು ಶಾಂತಿಗ್ರಾಮ ಪೊಲೀಸ್ ಠಾಣೆ ಮೊಕ್ಕದ್ದಮೆ ನಂ 142/2019 ಕ್ಕೆ ಸಂಬಂಧಿಸಿದಂತೆ ಆರೋಪಿ ಮತ್ತು ಮಾಲು ಪತ್ತೆಗಾಗಿ ನಮ್ಮನ್ನು ನೇಮಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು ಇಲಾಖಾ ಜೀಪಿನಲ್ಲಿ ಹಲಸನ ಹಳ್ಳಿ, ಮಳ್ಳಿ ಕ್ರಾಸ್ ಹತ್ತಿರ ಗಸ್ತು ಮಾಡುತ್ತಿದ್ದಾಗಾ ಸಂಜೆ 6-30 ಗಂಟೆಗೆ ಮೊಸಳೆಹೊಸಹಳ್ಳಿ ಕಡೆಯಿಂದ ಕೆ ಎ 09 ಎನ್ 1703 ನಂಬರಿನ ಕಾರು ಬಂದಿದ್ದು ನಾವು ಅದನ್ನು ತಡೆದು ನಿಲ್ಲಿಸಿ ಚಾಲನಕನ ಹೆಸರು ವಿಳಾಸ ವಿಚಾರಿಸಿದಾಗ

ತನ್ನ ಹೆಸರನ್ನು ಶಕೀರ್, ವಾಸ ಹಳೇ ತಾಲ್ಲೂಕು ಗ್ರಾಮ ಮಡಿಕೇರಿ ಜಿಲ್ಲೆ ಎಂದು ಹೇಳಿದ ಆತನ ಜೊತೆಗೆ ಕಾರಿನಲ್ಲಿ ಇದ್ದ ವ್ಯಕ್ತಿಗಳನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ರಿಯಾಸ್ ಪಾಶಾ ಅಲಿಯಾಸ್ ಇಲಿಯಸ್ ಬಿನ್ ಸಿರಾಜ್ ಪಾಶಾ ವಾಸ ಹಲಗನ ಹಳ್ಳಿ ಗ್ರಾಮ ಹಾಗೂ ಅರುಣ್ ಬಿನ್ ಜಯ ವಾಸ ಹಳೇ ತಾಲ್ಲೂಕು ಗ್ರಾಮ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಮೆಸಳೆಹೂಸಹಳ್ಳಿ ಕಡೆಯಿಂದ ಇನ್ನೊಂದು ಕೆ ಎ 04 ಎಂ ಸಿ 0800 ನಂಬರಿನ ಕಾರು ಬಂದಿದ್ದು, ಆಗ ನಾವು ಅದನ್ನು ತಡೆದಾಗ ಚಾಲಕನು ಕಾರನ್ನು ನಿಲ್ಲಿಸಿ ಓಡಿ ಹೋಗಿರುತ್ತಾನೆ. ಕಾರಿನಲ್ಲಿದ್ದ ವ್ಯಕ್ತಿಯ ಹೆಸರು ವಿಳಾಸನಮ್ನು ವಿಚಾರಿಸಿದಾಗ ತನ್ನ ಹೆಸರನ್ನು ಇಬ್ರಾಹಿಂ ಬಿನ್ ಖಾದರ್ ವಸಾ ಹಳೇ ತಾಲ್ಲೂಕು ಎಂದು ತಿಳಿಸಿದ್ದು ಓಡಿ ಹೋದ ಚಾಲಕನ ಹೆಸರು ವಿಚಾರಿಸಿದಾಗ ಸುಮೀರ್ ಅಹಮದ್ ವಾಸ ಹಲಗಳ ಹಳ್ಳಿ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅವರೆಲ್ಲರೂ ನಾವು ಕೇಳಿದಂತಹ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡದೇ ಇದ್ದುದ್ದರಿಂದ ಅವರುಗಳನ್ನು ವಶಕ್ಕೆ ಪಡೆದು ಚಾಸಾ 13 ರವರೊಂದಿಗೆ ಹಾಜರು ಪಡಿಸಿ ವರದಿ ಮಾಡಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ದಿಃ 07.01.2020 ರಂದು ಚಾಸಾ 12 ರವರೊಂದಿಗೆ ಕೃತ್ಯ ನಡೆದ ಸ್ಥಳದ ಮಹಜರ್ ಸಲುವಾಗಿ 3 ಸ್ಥಳಗಳಿಗೆ ಭೇಟಿ ನೀಡಿದ್ದು ಮೊದಲು ಕಡವಿನ ಬಾಚನಹಳ್ಳಿ ಗ್ರಾಮಕ್ಕೆ ಹೋಗಿ 2 ನೇ ಆರೋಪಿ ತೋರಿಸಿದ ಜಾಗದಲ್ಲಿ ಚಾಸಾ 6 ಮತ್ತು 7 ರವರ ಸಮಕ್ಷಮ ಬೆಳಗ್ಗೆ 7-00 ಯಿಂದ 7-15 ರ ವರೆಗೆ ಸ್ಥಳ ಮಹಜರ್ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳವು ರಾಜಯ್ಯ ಅವರ ಮನೆಯ ಕುರಿ ಕೂಡುಹಾಕುವ ಕೊಟ್ಟಿಗೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಾಜಯ್ಯ ಅವರ ಕೊಟ್ಟಿಗೆಯಿಂದ 22 ಕುರಿಗಳನ್ನು ತಾನು ಮತ್ತು ಉಳಿದ ಆರೋಪಿತರು ಸೇರಿ ಕಳವು ಮಾಡಿಕೊಂಡು ಮೇಲೆ ಹೇಳಿದ 2 ಕಾರುಗಳಲ್ಲಿ ತುಂಬಿ

ಕೊಂಡು ಹೋಗಿ ಮೈಸೂರಿನ ಮಟನ್ ಸ್ಟಾಲಿಗೆ ಮಾರಾಟ ಮಾಡಿ ಮುಂಗಡ ಹಣ ಪಡೆದುಕೊಂಡು 35 ಸಾವಿರ ರೂ ಬಾಕಿ ಉಳಿಸಿಕೊಂಡಿರುವುದಾಗಿ 2 ನೇ ಆರೋಪಿ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ದೇವರ ಮುದ್ದನಹಳ್ಳಿಗೆ ಭೇಟಿ ನೀಡಿ ಚಾಸಾ 6 ಮತ್ತು 7 ರವರ ಸಮಕ್ಷಮ 2 ನೇ ಆರೋಪಿ ತೋರಿಸಿದ ಜಾಗದಲ್ಲಿ ಬೆಳಗ್ಗೆ 7-30 ಯಿಂದ 7-45 ರ ವರೆಗೆ ಸ್ಥಳ ಮಹಜರ್ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳವು ದೇವರ ಮುದ್ದನಹಳ್ಳಿ ಗ್ರಾಮದ ಚಿಕ್ಕಯ್ಯ ಅವರಿಗೆ ಸೇರಿದ ಕೊಟ್ಟಿಗೆ ಆಗಿದ್ದು ಅಲ್ಲಿಂದ ಆರೋಪಿತರು 5 ಕುರಿ ಹಾಗೂ 5 ಕುರಿ ಮರಿಗಳನ್ನು ಕದ್ದುಕೊಂಡು ಹೋಗಿ ಎತ್ತುಗೋಡನ ಹಳ್ಳಿ ಸಂತೆಯಲ್ಲಿ 25 ಸಾವಿರ ರೂ ಗೆ ಮಾರಾಟ ಮಾಡಿ ಹಂಚಿಕೊಂಡಿರುತ್ತೇವೆ ಎಂದು 2 ನೇ ಆರೋಪಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಎಡೇಗೌಡನ ಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಚಾಸಾ 6 ಮತ್ತು 7 ರವರ ಸಮಕ್ಷಮ 2 ನೇ ಆರೋಪಿ ತೋರಿಸಿದ ಜಾಗದಲ್ಲಿ 8-15 ರಿಂದ 8-30 ಗಂಟೆಯ ವರೆಗೆ ಚಾಸಾ 1 ರವರ ಕೊಟ್ಟಿಗೆಯ ಮಹಜರ್ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳ ಕೊಟ್ಟಿಗೆಯಿಂದ ಆರೋಪಿತರು 16 ಕುರಿಗಳನ್ನು ಕಳ್ಳತನ ಮಾಡಿ ಮೈಸೂರಿನ ಮಟನ್ ಸ್ಟಾಲಿಗೆ ಮಾರಾಟ ಮಾಡಿ ಮುಂಗಡ ಹಣ ಪಡೆದಿರುತ್ತೇವೆ ಎಂದು 2 ನೇ ಆರೋಪಿ ತಿಳಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಅರಕಲಗೂಡಿಗೆ ಭೇಟಿ ನೀಡಿ 2 ನೇ ಆರೋಪಿ ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ಪಂಚುನಾಮೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 12-00 ಗಂಟೆಗೆ 2 ನೇ ಆರೋಪಿ ನಮ್ಮನ್ನು ಮೈಸೂರಿನ ಮಟನ್ ಸ್ಟಾಲಿಗೆ ಕರೆದುಕೊಂಡು ಹೋಗಿ ಇದೇ ಅಂಗಡಿಗೆ ತಾವು ಕದ್ದಿರುವ ಕುರಿಗಳನ್ನು ಮಾರಾಟ ಮಾಡಿ

ಮುಂಗಡ ಹಣ ಪಡೆದು 35 ಸಾವಿರ ರೂ ಬಾಕಿ ಉಳಿಸಿಕೊಂಡಿದ್ದೇವೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಮಟನ್ ಸ್ಟಾಲ್ ಮಾಲಿಕರು 2 ನೇ ಆರೋಪಿಯನ್ನು ನೋಡಿ ಗುರುತಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೆ ಸಂತೆಯಿಂದ ಕುರಿಗಳನ್ನು ತಂದು ನಿಮಗೆ ಕೊಟ್ಟಿದ್ದೇವೆ ಎಂದು ಹೇಳಿದ್ದರಿಂದ ನಾನು ಆರೋಪಿತರಿಂದ ಸದರಿ ಕುರಿಗಳನ್ನು ಖರೀದಿಸಿ ಅವುಗಳ ಮಾಂಸವನ್ನು ಮಾರಾಟ ಮಾಡಿದ್ದೇನೆ ಈ ದಿನವೇ ತನಗೆ ಆರೋಪಿತರು ಕದ್ದಿರುವ ಮಾಲನ್ನು ನನಗೆ ತಂದು ಕೊಟ್ಟಿರುತ್ತಾರೆ ಎಂದು ಗೊತ್ತಾಯಿತು ಹೀಗಾಗಿ ಬಾಕಿ ಇರುವ 35 ಸಾವಿರು ರೂಗಳನ್ನು ಈ ದಿನವೇ ಹಾಸನದ ಗ್ರಾಮಾಂತರ ವೃತ್ತ ನಿರೀಕ್ಷಕರ ಕಛೇರಿಗೆ ತಂದು ಕೊಡುತ್ತೇನೆ ಎಂದು ಮಟನ್ ಸ್ಟಾಲ್ ಮಾಲೀಕರು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ಚನ್ನರಾಯಪಟ್ಟಣ ಹಾಗೂ ಶ್ರವಣಬೆಳಗೊಳದಲ್ಲಿ ಪಂಚರು ಸಮಕ್ಷಮ ಪಂಚುನಾಮೆಗಳನ್ನು ಮಾಡಿ, ನಂತರ ಸಂಜೆ ಚಾಸಾ 13 ರವರ ಕಛೇರಿಗೆ ಹೋಗಿ ಮರುದಿನ ಮತ್ತೆ 2 ನೇ ಆರೋಪಿಯನ್ನು ತನಿಖಾಧಿಕಾರಿ ಪೊಲೀಸ್ ವಶಕ್ಕೆ ಪಡೆದು ಗಂಡಸಿ, ನುಗ್ಗೇಹಳ್ಳಿ ಮತ್ತು ಬಾಣಾವಾರದಲ್ಲಿ ಪಂಚರು ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮಧ್ಯಾಹ್ನ 2-00 ಗಂಟೆಗೆ ಚಾಸಾ 13 ರವನ್ನು ಹಾಜರುಪಡಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. 4 ನೇ ಆರೋಪಿಯನ್ನು ಇದೇ ಮೊದಲ ಬಾರಿ ನಾನು ನ್ಯಾಯಾಲಯದ ಮುಂದೆ ವಿಸಿ ಯಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗಳನ್ನು ಠಾಣೆಯಲ್ಲಿ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 2 ನೇ ಆರೋಪಿ ನಮಗೆ ಯಾವುದೇ ಸ್ಥಳಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 4 ನೇ

ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ 13 ನಮ್ಮ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.